ದಿ: **06-02-2026** ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ವಾಟೀಸವಾಲು: ಪ್ರತಿವಾದಿ ನಂಬರ್ 6 ಮತ್ತು 8 ರವರ ಪರವಾಗಿ ಶ್ರೀ ಎಮ್.ಜಿ. ವಕೀಲರಿಂದ:**

1. ನನಗೆ ಓದಲು ಬರೆಯಲು ಬರುವುದಿಲ್ಲ ನಾನು ವಿದ್ಯಾಭ್ಯಾಸ ಮಾಡಿಲ್ಲ. ವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೂ ಬರೆದಿದ್ದಾರೆಂದು ನನಗೆ ಗೊತ್ತಿದೆ. ಅವುಗಳನ್ನು ಇಂಗ್ಲೀಷ್ ಭಾಷೆಯಲ್ಲಿ ಬರೆದಿರುತ್ತಾರೆ. ಈ ದಾವೆಯನ್ನು ನನ್ನ ತಂದೆ ಸೂಗರಡ್ಡಿ, ನನ್ನ ಚಿಕ್ಕಪ್ಪನವರಾದ ಶಿವಪ್ಪ ಮತ್ತು ಶೇಷಪ್ಪ, ಸುಶೀಲಮ್ಮ , ಅಮರಮ್ಮ, ಮತ್ತು ಹೊಲ ತೆಗೆದುಕೊಂಡವರಾದ ಗಂಗಪ್ಪ, ಬಸ್ಸಪ್ಪ, ವಿರುಪಾಕ್ಷಪ್ಪ ಮತ್ತು ಗೌರಮ್ಮ ಇವರ ಮೇಲೆ ಸಲ್ಲಿಸಿರುತ್ತೇನೆ. ಪ್ರತಿವಾದಿ ನಂಬರ್ 6 ಮತ್ತು 8 ರವರು ಬಹಳ ವರ್ಷಗಳ ಹಿಂದೆ ನನ್ನ ತಂದೆಯವರಿಂದ ಹೊಲ ಖರೀದಿ ಮಾಡಿರುತ್ತಾರೆ. ಪ್ರತಿವಾದಿ ನಂಬರ್ -10 ರವರು ಇವರು ಹೊಲವನ್ನು ಲೀಜ್ ಗೆ ಹಾಕಿಕೊಂಡಿರುತ್ತಾರೆ. ಇವರು ಹುನಗುಂದಬಾಡ ನಲ್ಲಿರುವ ಜಮೀನು ಲೀಜ್ ಗೆ ಮಾಡಿಕೊಂಡಿರುತ್ತಾರೆ ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ.

2. ದಾವಾ ಹೊಲಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಹೊಲಗಳು ಹುನಗುಂದಬಾಡ ಗ್ರಾಮದಲ್ಲಿರುತ್ತವೆ. ಇದನ್ನು ಹೊರತುಪಡಿಸಿ ಬೇರೆ ಊರಿನಲ್ಲಿರುವುದಿಲ್ಲ. ಪ್ರತಿವಾದಿ ನಂಬರ್ 1 ಮತ್ತು 2 ಇವರು ಸುಲ್ತಾನಪುರ ಮತ್ತು ಹುನಗುಂದಬಾಡನಲ್ಲಿರುತ್ತಾರೆ. 3 ನೇ ಪ್ರತಿವಾದಿ ಶೇಷಪ್ಪ ಹುನಗುಂದಬಾಡದಲ್ಲಿರುತ್ತಾರೆ. ಪ್ರತಿವಾದಿ ನಂಬರ್ 1 ಮತ್ತು 2 ಇವರು ಸುಲ್ತಾನಪುರದಲ್ಲಿ ಇರುತ್ತಾರೆ ಇವರು ಹುನುಗುಂದ ಬಾಡದಿಂದ ಇವರು ಸುಲ್ತಾನಪುರ ಮನೆತನಕ್ಕೆ ಹೋಗಿರುತ್ತಾರೆ. ಸುಲ್ತಾನಪುರದಲ್ಲಿರುವ ಜಮೀನುಗಳ ಮೇಲೆ ರಾಯಚೂರು ನ್ಯಾಯಾಲಯದಲ್ಲಿ ಕೇಸ್ ಹಾಕಿರುತ್ತಾರೆ. ಹುನಗುಂದಬಾಡ ಗ್ರಾಮದಲ್ಲಿರುವ ಜಮೀನುಗಳನ್ನು ಮಾರಿ ಸುಲ್ತಾನಪುರ ಗ್ರಾಮದಲ್ಲಿ ಜಮೀನುಗಳನ್ನು ಉಳಿಸಿಕೊಂಡಿರುತ್ತಾರೆ ಎಂದರೆ ಸರಿ.

3. ಹುನಗುಂದಬಾಡ ಗ್ರಾಮದಲ್ಲಿರುವ ಜಮೀನುಗಳನ್ನು ಪ್ರತಿವಾದಿ ನಂಬರ್ 6 ಮತ್ತು 8 ಇವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. 3ನೇ ಪ್ರತಿವಾದಿ ತನ್ನ ಪಾಲಿನ ಜಮೀನನ್ನು ಮಾರಾಟ ಮಾಡಿರುತ್ತಾನೆ.

ಸಾಕ್ಷಿ ಮುಂದುವರಿದು ನನ್ನ ತಂದೆಯ ಪಾಲನ್ನು ಮಾರಾಟ ಮಾಡಿರುವುದಿಲ್ಲ ನನ್ನ ತಂದೆಗೆ ಮೋಸ ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ತಂದೆ ನನಗೆ ಮೋಸ ಮಾಡಿರುತ್ತಾರೆ. ನನ್ನ ತಂದೆ ನನ್ನ ಲಗ್ನವಾದ ಮೇಲೆ ನನಗೆ ಏನೂ ಕೊಟ್ಟಿರುವುದಿಲ್ಲ ಮತ್ತು ನನ್ನನ್ನು ನೋಡಿರುವುದಿಲ್ಲ. ನನ್ನ ಮದುವೆಯಾಗಿ 7 ವರ್ಷ ಗಳ ಹಿಂದೆ ಆಗಿರುತ್ತದೆ, ನನ್ನ ಅಕ್ಕಮ್ಮ ತಿಪ್ಪಮ್ಮ ಇವರ ಮದುವೆಯು 6 ವರ್ಷಗಳ ಹಿಂದೆ ಆಗಿರುತ್ತದೆ. ನನ್ನ ಚಿಕ್ಕಪ್ಪ ಶಿವಪ್ಪ ನನ್ನ ತಂದೆಯ ಹೊಲ ವನ್ನು ಮಾರಾಟ ಮಾಡಿ ನಮ್ಮ ಮದುವೆಯನ್ನು ಮಾಡಿರುತ್ತಾರೆ.

4. ದಾವಾ ಸರ್ವೆ ನಂಬರ್ 45/2 ರಲ್ಲಿ ತನ್ನ ಪಾಲಿಗೆ ಬಂದ 2-00 ಎಕರೆ ಹೊಲವನ್ನು 3ನೇ ಪ್ರತಿವಾದಿ ಇವರು 9ನೇ ಪ್ರತಿವಾದಿಗೆ 2016-17 ಸಾಲಿನಲ್ಲಿ ರೂ 2,56,000/- ಗಳಿಗೆ ಮಾರಾಟ ಮಾಡಿದ್ದಾನೆ ಎಂದರೆ ಸಾಕ್ಷಿಯು ಮೊದಲು ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರಿದು ನಮ್ಮ ತಂದೆಗೆ ಗೊತ್ತಾಗಲಾರದಂತೆ ಮಾರಾಟ ಮಾಡಿದ್ದಾನೆಂದು ಹೇಳುತ್ತಾರೆ. ಈ ವಿಷಯ ನನ್ನ ಅಕ್ಕಳಿಗೆ ಗೊತ್ತಿರುತ್ತದೆ ನಾನು ಚಿಕ್ಕವಳಿರುವುದರಿಂದ ನನಗೆ ನನ್ನ ಅಕ್ಕ ತಿಳಿಸಿರುತ್ತಾಳೆ. 2021-22 ನೇ ಸಾಲಿನಲ್ಲಿ 9 ನೇ ಪ್ರತಿವಾದಿ ಸದರಿ ಜಮೀನನ್ನನು 8ನೇ ಪ್ರತಿವಾದಿಗೆ ರೂ 7,90,000/- ಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಿದ್ದರು ಎನ್ನುತ್ತಾರೆ.

5. 2011-12 ನೇ ಸಾಲಿನಲ್ಲಿ 2ನೇ ಪ್ರತಿವಾದಿ ಸನಂ 45/2 ರಲ್ಲಿ ವಿಸ್ತೀರ್ಣ 2-00 ಎಕರೆ ಜಮೀನನ್ನು ರೂ 1,50,000/- ಗಳಿಗೆ 6ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿ ಮುಂದುವರಿದು ನನ್ನ ತಂದೆಗೆ ಈ ವಿಷಯ ಗೊತ್ತಿರುವುದಿಲ್ಲ ಅವರೊಬ್ಬರೆ ಸಹಿ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ಖರಿದಿ ಪತ್ರಕ್ಕೆ ನಿಮ್ಮ ಇನ್ನೊಬ್ಬ ಚಿಕ್ಕಪ್ಪ ಶೇಷಪ್ಪ ಇವರು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ. ಈ 03 ಕ್ರಯಪತ್ರಗಳನ್ನು ಪ್ರಶ್ನೆ ಮಾಡಿ ನೀವು ಎಲ್ಲಿ ತಕರಾರು ಹಾಕಿಲ್ಲ ಎಂದರೆ ಸರಿ. ದಾವಾ ಹೊಲಗಳನ್ನು ಖರೀದಿ ಮಾಡಿದವರು ಸಾಗುವಳಿ ಮಾಡುತ್ತಿದ್ದಾರೆ

ಎಂದರೆ ಸರಿ. 1 ಮತ್ತು 2ನೇ ಪ್ರತಿವಾದಿಯರು ಸುಲ್ತಾನಪುರ ಗ್ರಾಮದಲ್ಲಿ ವಾಸ ಮಾಡುತ್ತಾರೆ 3ನೇ ಪ್ರತಿವಾದಿ ಹುನುಗುಂದ ಬಾಡ ಗ್ರಾಮದಲ್ಲಿ ವಾಸ ಮಾಡುತ್ತಾರೆ. 1 ಮತ್ತು 2ನೇ ಪ್ರತಿವಾದಿಯರು ಬೇರೆ ಬೇರೆ ಮನೆಯಲ್ಲಿ ವಾಸ ಮಾಡುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಒಂದೇ ಮನೆಯಲ್ಲಿ ವಾಸ ಮಾಡುತ್ತಾರೆ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ನನ್ನ ತಂದೆಯವರನ್ನು ಯಾರು ನೋಡಿಕೊಳ್ಳದೆ ಇರುವುದರಿಂದ ಅವರ ತಮ್ಮ 2ನೇ ಪ್ರತಿವಾದಿಯ ಹತ್ತಿರ ಹೋಗಿರುತ್ತಾರೆ ಎನ್ನುತ್ತಾರೆ. ಪ್ರತಿವಾದಿ 1 ರಿಂದ 3 ಇವರು ಸುಮಾರು 30 ವರ್ಷದ ಹಿಂದೆ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಅವರವರ ಭಾಗದ ಪ್ರಕಾರ ಅವರು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ.

ಪ್ರತಿವಾದಿ ನಂಬರ್ 1 ರಿಂದ 5 ರವರು ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ